ಮರುಭೂಮಿಯಲ್ಲಿ ನಡೆದು ಹೋಗುತ್ತಿದ್ದವನಿಗೆ ಓಯಸಿಸ್ ಸಿಕ್ಕ ಅನುಭವ. ಪದೇ ಪದೇ ಗಾಯದ ಸಮಸ್ಯೆ, 'ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್' (ಐಸಿಸಿ) ಸಂಘಟಿಸುವ ಮಹತ್ವದ ಟೂರ್ನಿಯಲ್ಲಿ ಸ್ಥಿರ ಪ್ರದರ್ಶನದ ಕೊರತೆ ಹಾಗೂ ನಿರಂತರ ಟೂರ್ನಿಗಳ ಸವಾಲು ಎದುರಿಸುತ್ತಿದ್ದ ಭಾರತ ತಂಡ 'ಏಷ್ಯಾ ಕಪ್'ನಲ್ಲಿ ಎಂಟನೇ ಬಾರಿ ಚಾಂಪಿಯನ್ ಆಗಿದೆ. ಇದು ಕ್ರಿಕೆಟ್ ಲೋಕದ ಪ್ರತಿಷ್ಠಿತ ಟೂರ್ನಿ ವಿಶ್ವಕಪ್ ತಯಾರಿಯ ಹುಮ್ಮಸ್ಸಿಗೆ 'ಬೂಸ್ಟರ್ ಡೋಸ್'ನಂತಿದೆ.

ಕ್ರೀಡಾಪ್ರೇಮಿಗಳಿಗೆ ಈಗ ಸಂಭ್ರಮದ ಕಾಲ. ಚೀನಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ (ಸೆ. 23ರಿಂದ ಅ. 8ರವರೆಗೆ) ಒಂದೆಡೆಯಾದರೆ, ಅಕ್ಟೋಬರ್ 5ರಿಂದ ನವೆಂಬರ್ 19ರ ತನಕ ಏಕದಿನ ಮಾದರಿಯ ಕ್ರಿಕೆಟ್ ವಿಶ್ವಕಪ್ ಇನ್ನೊಂದೆಡೆ. 48 ವರ್ಷಗಳ ಇತಿಹಾಸದ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಭಾರತ ಮೊಟ್ಟಮೊದಲ ಬಾರಿಗೆ ಸ್ವತಂತ್ರವಾಗಿ ಆತಿಥ್ಯ ವಹಿಸಿದೆ. ರೌಂಡ್‌ರಾಬಿನ್ ಮತ್ತು ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಒಟ್ಟು 48 ಪಂದ್ಯಗಳ ರಸದೌತಣ ಅಭಿಮಾನಿಗಳಿಗೆ ಸಿಗಲಿದೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಟೂರ್ನಿ ಇದಾಗಿದ್ದು, ಇದು 13ನೇ ಟೂರ್ನಿ. ಇದೇ ವರ್ಷದ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ನಡೆಯಬೇಕಿತ್ತು. ಕೋವಿಡ್ ಕಾರಣದಿಂದಾಗಿ ಐಸಿಸಿ ವೇಳಾಪಟ್ಟಿಯಲ್ಲಿ ಏರುಪೇರಾಗಿದ್ದರಿಂದ ಈ ಬಾರಿ ತಡವಾಗಿದೆ.

ಟೂರ್ನಿಯಲ್ಲಿ ಹಿಂದಿನ ವಿಶ್ವಕಪ್‌ನಂತೆ ಈ ಬಾರಿಯೂ ಹತ್ತು ತಂಡಗಳು ಪಾಲ್ಗೊಳ್ಳಲಿವೆ. ಆತಿಥೇಯ ಭಾರತದೊಂದಿಗೆ, ಐಸಿಸಿ ಸೂಪರ್ ಲೀಗ್ ಮೂಲಕ ಅರ್ಹತೆ ಪಡೆದಿರುವ ಆಸ್ಟ್ರೇಲಿಯಾ, ಅಫ್ಘಾನಿಸ್ತಾನ, ಬಾಂಗ್ಲಾದೇಶ, ಇಂಗ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಅರ್ಹತಾ ಟೂರ್ನಿಗಳ ಮೂಲಕ ಅವಕಾಶ ಗಳಿಸಿರುವ ಶ್ರೀಲಂಕಾ ಮತ್ತು ನೆದರ್ಲೆಂಡ್ಸ್ ತಂಡಗಳು ಪೈಪೋಟಿ ನಡೆಸಲಿವೆ. ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಧರ್ಮಶಾಲಾ, ಕೋಲ್ಕತ್ತ, ಲಖನೌ, ಮುಂಬೈ, ಪುಣೆ ಮತ್ತು ಹೈದರಾಬಾದ್ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಿಗದಿಯಾಗಿವೆ.

ಭಾರತ ತಂಡ ಮಹತ್ವದ ಟೂರ್ನಿಯಲ್ಲಿ ಕೊನೆಯ ಬಾರಿಗೆ ಪ್ರಶಸ್ತಿ ಜಯಿಸಿದ್ದು 2018ರ ಏಷ್ಯಾಕಪ್‌ನಲ್ಲಿ. ಆಗಿನಿಂದಲೂ ಪ್ರಶಸ್ತಿಗಾಗಿ ಪರದಾಡುತ್ತಿತ್ತು. ಸಮೀಪ ಬಂದು ಮುಗ್ಗರಿಸುತ್ತಿತ್ತು. ಕಳೆದ ವಾರ ಶ್ರೀಲಂಕಾ ವಿರುದ್ಧ ನಡೆದ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಪಡೆದ ಅಪೂರ್ವ ಹತ್ತು ವಿಕೆಟ್‌ಗಳ ಗೆಲುವು 'ವಿಶ್ವಕಪ್ ಹೆದ್ದಾರಿ'ಯ ಆತ್ಮವಿಶ್ವಾಸ ಹೆಚ್ಚಿಸಿದೆ. ಐದು ವರ್ಷಗಳ ಹಿಂದೆ ಭಾರತ ಏಕದಿನ ತಂಡಕ್ಕೆ ವಿರಾಟ್ ಕೊಹ್ಲಿ ನಾಯಕರಾಗಿದ್ದರು. ಕಾಕತಾಳೀಯವೊ ಏನೋ – ಕಳೆದ ಬಾರಿ ಏಷ್ಯಾಕಪ್ ವೇಳೆ ಕೊಹ್ಲಿಗೆ ವಿಶ್ರಾಂತಿ ನೀಡಿದ್ದರಿಂದ ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸಿದ್ದರು. ಈ ಬಾರಿಯೂ ರೋಹಿತ್ ನಾಯಕತ್ವದಲ್ಲಿ ಭಾರತ ಏಷ್ಯಾ ಕಪ್ ಗೆದ್ದಿದೆ.

ಈ ಸಲದ ವಿಶ್ವಕಪ್‌ನಲ್ಲಿ ರೋಹಿತ್ ಮೊದಲ ಬಾರಿಗೆ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ಏಷ್ಯಾಕಪ್ ಅಂತ್ಯಕ್ಕೆ ಏಕದಿನ ಕ್ರಿಕೆಟ್‌ನಲ್ಲಿ 248 ಪಂದ್ಯಗಳನ್ನಾಡಿ 10,031 ರನ್‌ಗಳನ್ನು ಗಳಿಸಿರುವ ರೋಹಿತ್, ಬ್ಯಾಟಿಂಗ್ ವಿಭಾಗದ ಶಕ್ತಿಯಾಗುವ ಜೊತೆಗೆ ಪ್ರಮುಖ ಟೂರ್ನಿಯಲ್ಲಿ ತಂಡವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುವ ಸವಾಲು ಎದುರಿಸುತ್ತಿದ್ದಾರೆ. ಏಷ್ಯಾಕಪ್ ಪಂದ್ಯಾವಳಿಯ ಫೈನಲ್‌ನಲ್ಲಿ ಶ್ರೀಲಂಕಾ ತಂಡವನ್ನು ಕೇವಲ 50 ರನ್‌ಗೆ ಆಲೌಟ್ ಮಾಡಿ ವೇಗದ ಬೌಲರ್‌ಗಳ ಶಕ್ತಿ ಪ್ರದರ್ಶಿಸಿದ್ದು ತಂಡದ 'ವೇಗದ ಶಕ್ತಿ' ಹೆಚ್ಚಿಸಿದೆ.

ಏಷ್ಯಾಕಪ್ ಗೆದ್ದ ಬಳಿಕ ಭಾರತದ ಆಟಗಾರರಲ್ಲಿ ಹುಮ್ಮಸ್ಸು ಇಮ್ಮಡಿಗೊಂಡಿದೆ. ಟೂರ್ನಿಯ



ವಿಶ್ವಕಪ್ ತಂಡದಲ್ಲಿರುವ ಏಕೈಕ ಕನ್ನಡಿಗ ಕೆ.ಎಲ್. ರಾಹುಲ್

## ಭಾರತ ತಂಡದಲ್ಲಿ ಏಕೈಕ ಕನ್ನಡಿಗ ರಾಹುಲ್

ಈ ಸಲದ ವಿಶ್ವಕಪ್ ತಂಡದಲ್ಲಿರುವ ಕರ್ನಾಟಕದ ಏಕೈಕ ಆಟಗಾರ ಕೆ.ಎಲ್. ರಾಹುಲ್. ಮಂಗಳೂರಿನ ರಾಹುಲ್ ಮೇಲಿಂದ ಮೇಲೆ ಗಾಯದ ಸಮಸ್ಯೆ ಎದುರಿಸುತ್ತಿದ್ದರೂ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ತೋರುವ ಭರವಸೆ ಮೂಡಿಸಿದ್ದಾರೆ.

2019ರ ವಿಶ್ವಕಪ್‌ನ ಮೊದಲ ಎರಡು ಪಂದ್ಯಗಳಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದ ಅವರು, ಬಳಿಕ ರೋಹಿತ್ ಶರ್ಮಾ ಜೊತೆಗೂಡಿ ಇನಿಂಗ್ಸ್ ಆರಂಭಿಸಿದ್ದರು. ಎರಡು ಅರ್ಧಶತಕ ಮತ್ತು ಒಂದು ಶತಕ ಸೇರಿದಂತೆ ಒಟ್ಟು 361 ರನ್ ಗಳಿಸಿ ಟೂರ್ನಿಯಲ್ಲಿ ಭಾರತದ ಪರ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದರು.

ದೇಶಿ ಟೂರ್ನಿಗಳಲ್ಲೂ ಉತ್ತಮ ಪ್ರದರ್ಶನ ನೀಡುತ್ತಿರುವ ಬಲಗೈ ಬ್ಯಾಟ್ಸ್‌ಮನ್ ರಾಹುಲ್ 2016ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಏಕದಿನ ಮಾದರಿಗೆ ಪದಾರ್ಪಣೆ ಮಾಡಿದರು. ಏಷ್ಯಾ ಕಪ್ ಅಂತ್ಯಕ್ಕೆ 58 ಪಂದ್ಯಗಳಿಂದ ಒಟ್ಟು 2,155 ರನ್ ಗಳಿಸಿದ್ದಾರೆ. ಇದರಲ್ಲಿ ಆರು ಶತಕ ಮತ್ತು 13 ಅರ್ಧಶತಕಗಳು ಸೇರಿವೆ. ಈಗ ಅವರು ತಂಡದ ಪ್ರಮುಖ ಬ್ಯಾಟಿಂಗ್ ಶಕ್ತಿಯೂ ಆಗಿದ್ದಾರೆ.